ಮುಖಮಾಡಿ ಮೇಲೇರುತ್ತಾನೆ. ಆದ್ದರಿಂದ ಇದಕ್ಕೆ **'ಅಭ್ಯಾರೋಹ ಮಂತ್ರ'** ಎನ್ನುತ್ತಾರೆ. ವ್ಯಾಪಕವಾಗಿ ಪ್ರಸಿದ್ಧವಾಗಿರುವ ಈ ಮಂತ್ರದ ಸಾಮಾನ್ಯ ಅರ್ಥ ಎಲ್ಲರಿಗೂ ವಿದಿತ. ಆದರೆ ಬೃಹದಾರಣ್ಯಕೋಪ ನಿಷತ್ತಿನಲ್ಲಿ ಈ ಮಂತ್ರದ ಅಂತರಾರ್ಥವನ್ನು ಹೀಗೆ ವಿವರಿಸಿದ್ದಾರೆ: ಅಸತ್ ಎಂದರೆ ಸತ್ ಅಲ್ಲದ್ದು. ಬಂದು ಹೋಗುವ ಆಗಂತುಕ ಅವಸ್ಥೆ. ಪ್ರಕೃತಿಸಹಜವಾಗಿರುವ ಕರ್ಮ ಮತ್ತು ಜ್ಞಾನವನ್ನು ಮೃತ್ಯುವಿಗೆ ಕಾರಣವೆಂದು ಗುರುತಿಸಿ, ಅದನ್ನೇ ಮೃತ್ಯುವೆಂದು ಉಪನಿಷತ್ತು ಭಾವಿಸುತ್ತದೆ. ಪ್ರಾಕೃತ ಕರ್ಮ ಹಾಗೂ ಪ್ರಾಕೃತ ಜ್ಞಾನವು ಮಾನವನ ಅತ್ಯಂತ ಅವನತಿಗೆ ಕಾರಣ. ಸತ್ ಎಂದರೆ ಅಮೃತ, ಸಾವಿಲ್ಲದ್ದು, ಶಾಶ್ವತ ಎಂದರ್ಥ. ಶಾಸ್ತ್ರಸಂಸ್ಕಾರದಿಂದ ಸುಸಂಸ್ಕೃತವಾದ ಕರ್ಮ ಮತ್ತು ಸುಸಂಸ್ಕೃತವಾದ ಜ್ಞಾನವನ್ನು 'ಸತ್' ಎಂದು ಭಾವಿಸಲಾಗಿದೆ. ಶಾಸ್ತ್ರೀಯವಾದ ಕರ್ಮ ಮತ್ತು ಶಾಸ್ತ್ರೀಯವಾದ ಜ್ಞಾನವು ಮಾನವನ ಔನ್ನತ್ಯದ ಚರಮಸೀಮೆಯಾದ ಅಮರತೆಗೆ ಕಾರಣ. ಆದ್ದರಿಂದ ಅಸತ್ ಕರ್ಮ ಮತ್ತು ಅಸತ್ ಜ್ಞಾನದಿಂದ, ಸತ್ಕರ್ಮ ಹಾಗೂ ಸತ್‌ಜ್ಞಾನದತ್ತ ತಲುಪಿಸಬೇಕೆಂಬ ಬಯಕೆ ಈ ಪ್ರಾರ್ಥನೆಯಲ್ಲಿದೆ. ದೇವಭಾವವನ್ನು ಕರುಣಿಸುವ ಆತ್ಮಜ್ಞಾನವನ್ನು ಅನುಗ್ರಹಿಸಿ ಅಮರರನ್ನಾಗಿಸುವ ಬೇಡಿಕೆ ಇದು.

ಮೃತ್ಯುವನ್ನೇ ತಮಸ್ಸು ಅಂದರೆ ಕತ್ತಲೆ ಎಂದು ಪರಿಗಣಿಸಲಾಗಿದೆ. ಅಜ್ಞಾನವೆಲ್ಲವೂ ಕತ್ತಲೆಯಂತೆಯೇ ನಿಜವನ್ನು ಮುಚ್ಚುವ ಸ್ವಭಾವವುಳ್ಳದ್ದು. ನಿಜವನ್ನು ಮುಚ್ಚುವುದರಿಂದಲೇ ಮರಣ ಪ್ರಾಪ್ತವಾಗುತ್ತದೆ. ದೈವಸ್ವರೂಪವೇ ಅಮೃತ. ಪ್ರಕಾಶಕವಾದದ್ದು ಬೆಳಕು. ಬೆಳಕು ಕತ್ತಲೆಯನ್ನು ಕಳೆಯುತ್ತದೆ. ಈ ಬೆಳಕು ಅಮೃತ, ಸಾವಿಲ್ಲದ್ದು. ಹೀಗೆ ದೇವಭಾವೋದ್ದೀಪನೆಯೇ ಈ ಮಂತ್ರ ಜಪದ ಮೂಲ ಉದ್ದೇಶ. ಮೂಲತಃ ಸಾಧನವಲ್ಲದ್ದನ್ನು ಸಾಧನವನ್ನಾಗಿ ಪರಿವರ್ತಿಸುವ ಹಂಬಲದಿಂದ **'ಅಸತೋ ಮಾ ಸದ್ಗಮಯ'** ಎಂಬ ಜಪವನ್ನು ಮಾಡಬೇಕು. **'ತಮಸೋ ಮಾ ಜ್ಯೋತಿರ್ಗಮಯ'** ಎಂಬ ಜಪದಿಂದ ಸಾಧನವಾದ ಅಜ್ಞಾನ ದಿಂದ ಅಮರತ್ವವು ಸಾಧ್ಯವಾಗುವಂತೆ ಮಾರ್ಪಡಿಸಬೇಕು. **'ಮೃತ್ಯೋರ್ಮಾ ಅಮೃತಂ ಗಮಯ'** ಎಂಬ ಜಪದಿಂದ ಬೇಡಿಕೆಯ ಉಪಸಂಹಾರವನ್ನು ಮಾಡಬೇಕು.

ಅಶ್ವಮೇಧಯಾಗದಲ್ಲಿ ಪ್ರಸ್ತೋತಾ ಎಂಬ ಋತ್ವಿಜನು ಪವಮಾನ ಸಾಮಗಾನವನ್ನು ಪ್ರಾರಂಭಿಸಿದಾಕ್ಷಣ ಯಾಗದ ಯಜಮಾನನು ಈ ಮೂರೂ ಮಂತ್ರಜಪವನ್ನು ಮಾಡ ಬೇಕೆಂದು ವಿಧಿಸಲಾಗಿದೆ. ಈ ಮಂತ್ರವನ್ನು ಬ್ರಾಹ್ಮಣದಲ್ಲಿ ಪಠಿಸಿದ್ದರಿಂದಲೂ, **'ಏತಾನಿ ಜಪೇತ್'** ಎಂದು ಬಹುವಚನದಲ್ಲಿ ನಿರ್ದೇಶಿಸಿರುವುದರಿಂದಲೂ, ಮಂತ್ರಸ್ವರವನ್ನು ನಿಯೋಜಿಸದೆ ಪಾಠಸ್ವರವನ್ನೇ ಜಪಕ್ಕಾಗಿ ಪ್ರಯೋಗಿಸಬೇಕು. ಇದನ್ನೇ ಶ್ರೀಮದ್ ಭಗವತ್ ಶಂಕರಾಚಾರ್ಯರು ತಮ್ಮ ಬೃಹದಾರಣ್ಯಕ ಭಾಷ್ಯದಲ್ಲಿ ಹೀಗೆ ಉಲ್ಲೇಖಿಸಿದ್ದಾರೆ: **ಯಥಾಪಠಿತ ಏವ ಸ್ವರಃ ಪ್ರಯೋಕ್ತವ್ಯಃ ನ ಮಾಂತ್ರಃ** ಎಂದು.

ಮಾಧ್ಯಂದಿನ ಶತಪಥ ಬ್ರಾಹ್ಮಣವು **ದ್ವಯಾ ಹ ಪ್ರಾಜಾಪತ್ಯಾ ದೇವಾಸುರಾಶ್ಚ** ಎಂದು ಪ್ರಾರಂಭವಾಗಿದೆ. ಕಾಣ್ವ ಶತಪಥ ಬ್ರಾಹ್ಮಣದ ಮೂರನೆಯ ಬ್ರಾಹ್ಮಣವೇ ಮಾಧ್ಯಂದಿನ ಬ್ರಾಹ್ಮಣದ ಪ್ರಾರಂಭವಾಗಿದೆ. ಪ್ರಜಾಪತಿಯ ಮಕ್ಕಳು ಎರಡು ವಿಧ: ದೇವತೆಗಳು, ರಾಕ್ಷಸರು. ಪ್ರಾಣ ಮತ್ತು ವಾಕ್ ಮುಂತಾದವು ಇದೇ ಪ್ರಜಾಪತಿಯಿಂದ ಉದಯಿಸಿದವು. ಶಾಸ್ತ್ರಜನಿತ ಜ್ಞಾನಕರ್ಮಗಳಿಂದ ಸುಸಂಸ್ಕೃತರಾಗಿ ಬೆಳಗುವವರು ದೇವತೆಗಳು. ಸ್ವಾಭಾವಿಕವಾಗಿ ಪ್ರತ್ಯಕ್ಷಪ್ರಮಾಣ ಹಾಗೂ ಅನುಮಾನಪ್ರಮಾಣದಿಂದ ಉಂಟಾಗುವ ದೃಷ್ಟ ಪ್ರಯೋಜನಗಳಿರುವ ಕರ್ಮ ಮತ್ತು ಜ್ಞಾನದಿಂದ ಪ್ರವರ್ತಿ ಸುವ ಸ್ವಭಾವದವರೇ ಅಸುರರು. 'ಸುರ' ಶಬ್ದದ ಅಪೇಕ್ಷೆಯಿಂದ ಸುರರಲ್ಲದವರು ಅಸುರರೆಂದು ಸಾಮಾನ್ಯ ಗ್ರಹಿಕೆ. ಅಸುರರೆಂದರೆ ಸ್ವಭಾವತಃ ತಮ್ಮ ಪ್ರಾಣದಲ್ಲಿಯೇ ರತಿಯುಳ್ಳವರು. ಶಂಕರ ಭಗವತ್ಪಾದರು **ಸ್ವೇಷು ಏವ ಅಸುಷು ರಮಣಾತ್ ಅಸುರಾಃ** ಎಂಬ ವ್ಯುತ್ಪತ್ತಿಯನ್ನು ಕರುಣಿಸಿದ್ದಾರೆ. ತಮ್ಮ ಬದುಕಿನಲ್ಲಿಯೇ ರಮಿಸು ವವರು ಅಸುರರು. ಅಂದರೆ ಸುರ, ಅಸುರ ಎಂಬುದು ಭಾವದಿಂದ ನಿರ್ಣಯಿಸಬೇಕಾದ ಅಂಶಗಳು ಎನ್ನುವುದು ಇಲ್ಲಿ ಸ್ಪಷ್ಟವಾಗುತ್ತದೆ.

ಅಸಂಸ್ಕೃತವಾದ ಜ್ಞಾನಕರ್ಮಗಳಿಂದ ಪ್ರಭಾವಿತರಾದ್ದರಿಂದ ಅಸುರರು ಅಧಿಕ. ಶಾಸ್ತ್ರೀಯ ಸಂಸ್ಕಾರದಿಂದ, ಸತ್ಕರ್ಮ ಸದನುಭವಪ್ರೇರಿತರಾದ ದೇವತೆಗಳು ವಿರಳರು. ದೃಷ್ಟ ಪ್ರಯೋಜನವಿರುವುದರಿಂದ ಜೀವಿಗಳಿಗೆ ಕರ್ಮಜ್ಞಾನ ಪ್ರವೃತ್ತಿಯು ಸ್ವಾಭಾವಿಕವಾಗಿಯೇ ಶಾಸ್ತ್ರಜನಿತ ಪ್ರವೃತ್ತಿಗಿಂತ ಹೆಚ್ಚಾಗಿರುತ್ತದೆ. ಕರ್ಮಜ್ಞಾನವನ್ನು ಸಂಸ್ಕರಿಸಲು ಅಧಿಕ ಯತ್ನ ಅಗತ್ಯ. ದೇವತೆ ಗಳಾಗಲಿ ಅಸುರರಾಗಲಿ, ಪ್ರಜಾಪತಿಯ ಶರೀರದಲ್ಲಿಯೇ ಅಡಗಿರುತ್ತಾರೆ. ಇವರಲ್ಲಿ ನಿರಂತರ ಸ್ಪರ್ಧೆ ನಡೆಯುತ್ತಲೇ ಇರು ತ್ತದೆ. ಪರಸ್ಪರ ಗೆಲುವು ಸೋಲಿಗಾಗಿ ಸೆಣಸಾಟ ಸಾಗುತ್ತಲೇ ಇರುತ್ತದೆ. ಕೆಲವೊಮ್ಮೆ ಶಾಸ್ತ್ರಜನಿತ ಕರ್ಮಜ್ಞಾನದಿಂದ ಪ್ರೇರಿತ ವಾದ ವೃತ್ತಿಯು ಪ್ರಾಣರೂಪರಾದ ಅಸುರರನ್ನು ಮೀರಿ ನಿಲ್ಲುತ್ತದೆ. ಆಗ ಆಸುರೀ ಪ್ರವೃತ್ತಿ ಸೋಲುತ್ತದೆ. ದೈವೀಭಾವದ ಗೆಲುವೇ ಆಸುರೀ ಭಾವದ ಸೋಲು. ಅದರಂತೆ ಆಸುರೀಭಾವದ ಗೆಲುವೇ ದೈವೀಭಾವದ ಸೋಲು.

ದೈವೀಭಾವ ಗೆದ್ದಾಗ ಧರ್ಮವು ಅಧಿಕವಾಗಿ ಔನ್ನತ್ಯವು ದೊರೆಯುತ್ತದೆ. ಪ್ರಜಾಪತಿತ್ವ ದೊರೆಯುವವರೆಗೆ ಈ ಔನ್ನತ್ಯ. ದೈವೀಭಾವ ಆಸುರೀಭಾವಗಳು ಸರಿಸಮಾನವಾಗಿದ್ದಾಗ ಮನುಷ್ಯತ್ವ ಪ್ರಾಪ್ತವಾಗುತ್ತದೆ. ಆಸುರೀಭಾವ ಗೆದ್ದರೆ ಅಧರ್ಮವು ಅಧಿಕವಾಗಿ, ಅವನತಿಯ ಹಾದಿ ಹಿಡಿದು ಸ್ಥಾವರತ್ವದ ಕಡೆಗೆ ಜೀವಿಗಳು ಇಳಿಯುತ್ತಾರೆ. ಅಸುರರಿಂದ ಸೋಲನ್ನು ಅನುಭವಿಸಿದ ದೇವತೆಗಳು ಗೆಲುವಿನ ಉಪಾಯಕ್ಕಾಗಿ ತಡಕಾಡುತ್ತಾರೆ. ಜ್ಯೋತಿಷ್ಟೋಮ ಯಜ್ಞದ 'ಉದ್ಗೀಥ' ಎಂಬ ಕರ್ಮವನ್ನು ಆಶ್ರಯಿಸಿ, ಅಸುರರನ್ನು ಗೆಲ್ಲಬೇಕೆಂದು ಬಯಸುತ್ತಾರೆ. ಅಂದರೆ ದೇವಭಾವವನ್ನು ಉಜ್ವಲಗೊಳಿಸಲು ಹೆಣಗುತ್ತಾರೆ.

ಜ್ಞಾನಕರ್ಮಗಳಿಂದ ಮಾತ್ರ ದೈವೀಭಾವವನ್ನು ಉಜ್ವಲ ಗೊಳಿಸಲು ಸಾಧ್ಯ ಎಂಬುದನ್ನು ಮನಗಂಡು, **ಅಸತೋ ಮಾ ಸದ್ಗಮಯ, ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂ ಗಮಯ** ಎಂಬ ಮೂರು ಮಂತ್ರಗಳನ್ನು ಜಪ ಮಾಡುವುದೇ ಕರ್ಮ. ಜ್ಞಾನವೇ ಈ ಮಂತ್ರಗಳ ಅಂತರಾರ್ಥದ ಅರಿವು. ಹೀಗೆ ಈ ಮಂತ್ರವೇ ಮೃತ್ಯುತಾರಕ ಮಂತ್ರ ಎಂಬುದು ಬೃಹದಾರಣ್ಯಕೋಪನಿಷತ್ತಿನ ಸಂದೇಶ.

(ಮುಂದುವರೆಯುವುದು)